IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಆಧುನಿಕ ಕನ್ನಡ ಕಾವ್ಯದಲ್ಲಿ ಬುದ್ಧನ ಅಷ್ಟಾಂಗ ಮಾರ್ಗದ ಪ್ರಭಾವ

**ಡಾ.ಶಿವಕುಮಾರ ಡಿ.ಸಿ**
**ಮಾರ್ಗದರ್ಶಕರು**
**ಸಹಾಯಕ ಪ್ರಾಧ್ಯಪಕರು**
**ಕನ್ನಡ ವಿಭಾಗ**
**ಜೈನ್ ವಿ.ವಿ**

**ಅರುಣ್ ಕುಮಾರ್ ಎ.ವೈ**
**ಸಂಶೋಧನಾರ್ಥಿ**
**ಸಹಾಯಕ ಪ್ರಾಧ್ಯಪಕರು**
**ಕನ್ನಡ ವಿಭಾಗ**
**ನ್ಯೂ ಬಾಲ್ಡ್ ವಿನ್ ಅ. ರಾ. ಪ. ಕಾಲೇಜು**

## ಪ್ರಸ್ತಾವನೆ

ಮನುಷ್ಯ ಮನುಷ್ಯನಾಗಿ ಬದುಕಲು ಎಷ್ಟೊಂದು ಕಷ್ಟ ಪಡುತ್ತಾನೆ. ಸದಾ ಕಾಲದೊಂದಿಗೆ ಸೆಣಸಾಡುತ್ತಾ ಯಾವುದಾದರೊಂದು ಸಮಸ್ಯೆಗೆ ಸಿಲುಕಿಕೊಳ್ಳುತ್ತಾ ಬಿಡುಗಡೆಗಾಗಿ ಹಾತೊರೆಯುತ್ತಾನೆ.ಹೀಗೆ ಆತ ಬಿಡುಗಡೆಗೆ ಹಾತೊರೆದಾಗಲೆಲ್ಲಾ.ತನ್ನ ರಕ್ಷಣೆಗೋಸ್ಕರ ಆತ ನೈತಿಕವಾಗಿಯೊ ಅನೈತಿಕವಾಗಿಯೊ ಎನಾದರೊಂದು ತೊಂದರೆ ಹುಟ್ಟುಹಾಕುತ್ತಾನೆ.ಹಿಂಸೆ ಶೋಷಣೆ ಹೀಗೆ ಯಾವುದಾದರು ಸರಿ. ಹೀಗೆ ಸದಾ ತನ್ನ ಸ್ವಾರ್ಥಕ್ಕಾಗಿ ಆತ ಏನಿಲ್ಲಾಮಾಡುತ್ತಾನೆ . ತಾನೊಬ್ಬ ಮನುಷ್ಯನೆನ್ನುವುದನ್ನ ಮರೆತು ಹೀಗೆ ಮನುಷ್ಯನಾಗಿ ಹುಟ್ಟಿದ ಮಾನವ ಮಾನವ ಸಂವೇದನೆಗಳನ್ನೆ ಮರೆಯುತ್ತಾನೆ. ಹೀಗೆ ಮನುಷ್ಯನ ತನವನ್ನೆ ಮರೆತ ಮಾನವನಿಗೆ ಯಾರದರೊಬ್ಬರ ಮಾರ್ಗದರ್ಶನ ಬೇಕಾಗುತ್ತದೆ.  ನಿಜವಾಗಿ ಮಾನವನಾಗಲು ಮನುಷ್ಯ ಮನುಷ್ಯನನ್ನು ಪ್ರೀತಿಸಲು.

ಹೀಗೆ ಸದಾ ಅಂಧಕಾರದಲ್ಲಿ ಬದುಕುತ್ತಿದ್ದ ಮಾನವನಿಗೆ ಬೆಳಕು ಬೇಕಾಯಿತು ಈ ಬೆಳಕನ್ನು ಯಾವುದೆ ಧರ್ಮ, ಜನಾಂಗ, ಮತ್ತು ಜಾತಿ ,ಸಂಪ್ರದಾಯಗಳು, ಇವು ಯಾವುಗಳು ನೀಡಲಿಲ್ಲ ಬದಲಾಗಿ ಇವುಗಳು ಮನುಷ್ಯನನ್ನು ಇನ್ನಷ್ಟು ಮೂಢನನ್ನಾಗಿ ಮಾಡಿದವು. ಹಾಗಾಗಿ ಇಂತಹ ಸಂದರ್ಭದಲ್ಲಿ ಕೇವಲ ಮೌಢ್ಯದೊಳಗೆ ಅಂಧಕಾರದೊಳಗೆ ಬದುಕುತ್ತಿದ್ದ ಮಾನವನಿಗೆ ಅನೇಕ ಮಹಾನ್ ಪುರುಷರ ದರ್ಶನವು ಅವರ ತಾತ್ವಿಕ ನೈಜ ತತ್ವಗಳು ಬದಲಾವಣೆಗೊಳಿಸ ತೊಡಗಿತು ಉದಾ : ಭಗವಾನ್ ಬುದ್ಧ ಬಸವಣ್ಣ ಅಂಬೇಡ್ಕರ್ ಎಂದೆ ಹೇಳಬಹುದು. ಇಲ್ಲಿ ಮುಖ್ಯವಾಗಿ ಬುದ್ಧನ ವಿಚಾರಧಾರೆಗಳನ್ನ ಮುಖ್ಯವಾಗಿರಿಸಿಕೊಂಡು ಬುದ್ಧನ ಅಷ್ಟಾಂಗ ಮಾರ್ಗದ ವಾಸ್ತವತೆಯ ಪ್ರಮುಖಾಂಶಗಳನ್ನ ಚರ್ಚಿಸಲಾಗಿದೆ.

ಕಪಿಲವಸ್ತುವಿನ ಶಾಕ್ಯರ ದೊರೆಯಾದ ಶುದ್ಧೋಧನ ಮಗ ಸಿದ್ಧಾರ್ಥ ಗೌತಮನಾದ ಬುದ್ಧನು ಲೋಕ ಹಿತವನ್ನು ಬಯಸುವ ಸಂದೇಶಗಳನ್ನು ಜಗತ್ತಿಗೆ ನೀಡಿದನು . ಈ ಲೋಕಹಿತವಾದ ಚಿಂತನೆಗಳೆ ಬೌದ್ಧದರ್ಮದ ಕೇಂದ್ರವಾಯಿತು. ಈ ಲೋಕ ಹಿತವಾದ ಬುದ್ಧನ ಮಾತುಗಳು ಸಮಾನತ ಮತ್ತು ಶಾಂತಿಯುತವಾದ ಜಗತ್ತೊಂದನ್ನ ಸೃಷ್ಟಿಸುವ ಪ್ರಯತ್ನವು ನಡೆಯಿತು ಹೀಗಾಗಿ ಬುದ್ಧನು ಅಂದು ಲೋಕದ ಸತ್ಯಾ ಸತ್ಯತೆಗಳನ್ನು ಕಂಡುಕೊಳ್ಳುವ ಅಥವಾ ಅವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವ ನಿಜಾಂಶಗಳನ್ನು ಅರಿಯುವ ಬುದ್ಧನ ಅಲೋಚನೆಗಳು ವಾಸ್ತವತೆಯನ್ನು ಕಂಡುಕೊಳ್ಳಲು ಸಾಧ್ಯವಾಯಿತು.

ಜೊತೆಗೆ ಈ ಪ್ರಕೃತಿಯಲ್ಲಿ ಬದುಕುವ ಮಾನವ ಮತ್ತು ಇತರ ಜೀವರಾಶಿಗಳಿಗೂ ಇರುವ ಸಂಬಂಧಕ್ಕೆ ಗೌತಮ ಬುದ್ಧ ಪ್ರಕೃತಿಯ ಚಲನೆಶೀಲತೆಯ ಕುರಿತು ವಿಶಿಷ್ಟವಾದ ಅರ್ಥಗಳನ್ನು ನೀಡಿದನು. ದೇವರ ಪರಿಕಲ್ಪನೆ, ಮೌಢ್ಯತೆ, ಕಂದಾಚಾರ, ಹಿಂಸೆ, ಇವೆಲ್ಲವೂಗಳನ್ನು ಒಳಗೊಂಡಂತೆ ನಿಜಾಂಶದ ಸತ್ಯಗಳನ್ನು ಕಂಡುಹಿಡಿಯುವುದರ ಮುಖೇನ ಬುದ್ಧ ಅವುಗಳಿಗೆ ಪರಿಹಾರವನ್ನು ಸೂಚಿಸಿದನು. ಹೀಗೆ ಗೌತಮಬುದ್ಧನ ಚಿಂತನೆಗಳು ಯಾವಾಗಲು ಮನುಷ್ಯ ಕೇಂದ್ರಿತ ಮತ್ತು ಮಾನವ ಪ್ರೇಮ ಪರವಾಗಿದ್ದವು.

ತನ್ನ ಬಾಲ್ಯದಿಂದಲು ಅಹಿಂಸೆಯನ್ನೆ ಪಾಲಿಸುತ್ತ ಹಿಂಸೆಯನ್ನೆ ವಿರೋಧಿಸಿದನು. ಹೀಗೆ ಸದಾಕಾಲ ಒಳಿತನ್ನೆ ಕಾಯ್ದುಕೊಳ್ಳುವ ಬುದ್ಧ ತನ್ನ ಜ್ಞಾನೋದಯವಾದ ನಂತರ ದೇಹ ದಂಡಿಸುವ ದೇವರ ಅಸ್ತಿತ್ವ ಮೋಕ್ಷ ಇಂತಹ ಅನರ್ಥನಂಬಿಕೆಗಳನ್ನು ದೂರಕ್ಕೆಸೆದು ಸತ್ಯಗಳನ್ನು ಕಂಡುಕೊಳ್ಳುವ ಮುಖೇನ ಪರಿವರ್ತನೆಗೊಂಡನು. ತಾನು ಪರಿವರ್ತನೆಗೊಂಡ ನಂತರ ಸದಾ ಸತ್ಯದ ಅಂಶಗಳನ್ನೆ ಶೋಧಿಸುತ್ತ ಸತ್ಯವನ್ನೆ ಭೋದಿಸುತ್ತಿದ್ದನು ಹೀಗೆ ಭೋದಿಸತ್ತ ಬುದ್ಧನ ವಿಚಾರಧಾರೆಗಳು ಹೊಸದೊಂದು ಧರ್ಮಹುಟ್ಟಲು ಅವಕಾಶವಾಯಿತು.ಅವನು ಭೋದಿಸಿದ ಭೋದನೆಗಳು ಅಥವಾ ಅಷ್ಟಾಂಗ ಮಾರ್ಗವು ಬೌದ್ಧಧರ್ಮದ ಮಧ್ಯಮಮಾರ್ಗವಾಯಿತೆಂದು ಹೇಳಲಾಗಿದೆ.(ಬುದ್ಧ ಮತ್ತು ಆತನ ಧಮ್ಮ – ಜಗದೀಶಕೊಪ್ಪ)

ಆಧುನಿಕ ಕಾಲಘಟ್ಟದಲ್ಲಿದ್ದರೂ ಇಂದಿನ ಸಮಾಜದ ಪರಿಸ್ಥಿತಿಗಳು ಶೋಚನೀಯವಾಗಿದೆ. ಅಭಿವೃದ್ಧಿ ಪಥದಲ್ಲಿ ಸಾಗುವ ಈ ಸಂಧರ್ಭದಲ್ಲಿ ಎಷ್ಟೋಪರಿಸ್ಥಿತಿಗಳು ಮಾನವನ ಕೈ ಮೀರಿ ಅವನತಿಯತ್ತ ಸಾಗಿದೆ. ಹಾಗಾಗಿ ಧರ್ಮದ ಕಾರಣದಲ್ಲಿ ಇಂದು ನಡೆಯುತ್ತಿರುವ ಹಿಂಸಚಾರ ಶೋಷಣೆ ಇವೆಲ್ಲವೂ ನಮ್ಮ ಕಣ್ಣಿಗೆ ಕಾಣುತ್ತಲೆಯಿದೆ ಹಾಗಾಗಿ ಇಂತಹ ಸಂದರ್ಭದಲ್ಲಿ ಜೀವವಿರೋಧಿ ಕೃತ್ಯಗಳು ಸೃಷ್ಟಿಯಾಗುವ ಹೊತ್ತಿಗೆ ಬುದ್ಧ ಭೋದಿಸಿದ ಅಷ್ಟಾಂಗಮಾರ್ಗ ಮಾನವ ಧರ್ಮವನ್ನು ಎತ್ತಿಹಿಡಿಯುವ ಮತ್ತು ಅದನ್ನು ಕಾಯ್ದುಕೊಳ್ಳುವ ಅನಿವಾರ್ಯತೆಯಿದೆ ಹಾಗಾಗಿ ಬುದ್ಧನ ಚಿಂತನೆ ಮತ್ತು ತತ್ವ ಎಲ್ಲಕಾಲಕ್ಕೂ ಪ್ರಸತ್ತುತವೆ ಆಗಿರುತ್ತದೆ.ಹೀಗಾಗಿ ಬುದ್ಧ ಪ್ರತಿಪಾದಿಸಿದ ಅಷ್ಟಾಂಗ ಮಾರ್ಗದ ವಿಷ್ಲೇಶಣೆ ಈ ಕೆಳಗಿನಂತಿದೆ.

**ಬುದ್ಧ ಪ್ರತಿಪಾದಿಸಿದ ಅಷ್ಟಾಂಗ ಮಾರ್ಗದ ವಿಶ್ಲೇಶಣೆ .**

ಅಷ್ಟಾಂಗ ಮಾರ್ಗ ಎಂದರೆ ಎಂಟು ಮಾರ್ಗ ಈ ಎಂಟು ಮಾರ್ಗಗಳನ್ನು ಬುದ್ಧ ತನ್ನ ಶಿಷ್ಯಂದರಿಗೆ ಭೋದಿಸುತ್ತಾನೆ ಮುಂದೆ ಈ ಅಷ್ಟಾಂಗ ಮಾರ್ಗದ  ಭೋಧನೆಯು ಬೌದ್ಧಧರ್ಮದ ಹುಟ್ಟಿಗೆ ಮುಖ್ಯವಾಗುತ್ತದೆ.

**1.ಸಮ್ಯಕ್ ದೃಷ್ಠಿ :** ಮನುಷ್ಯನ ಕೊನೆಗೊಳದ ಬೇಡಿಕೆ ಮತ್ತು ದುರಾಸೆ ಲಾಲಾಸೆ ಸ್ವಾರ್ಥ ಇವುಗಳನ್ನು ನಿರಾಕರಿಸಿ ಶಾಂತಿಯನ್ನು ಪಡೆಯುವ ಮಾರ್ಗ

**2.ಸಮ್ಯಕ್ ವಚನ :** ವ್ಯಕ್ತಿಯೊಬ್ಬ ತಾನು ಬಳಸುವ ಭಾಷೆಯಲ್ಲಿ ಎಚ್ಚರವಿದ್ದು ಸತ್ಯವನ್ನೆ ನುಡಿಯ ಬೇಕು ಉದಾ: ವಚನಗಳಲ್ಲಿ ಸತ್ಯದ ಮಾತಿನ ಬಗ್ಗೆ ಹೇಳಲಾಗಿದೆ ಇದು ಬುದ್ಧನ ಚಿಂತನೆಯನ್ನ ಹೋಲುತ್ತದೆ.

**3.ಸಮ್ಯಕ್ ಸಂಕಲ್ಪ :** ಮನುಷ್ಯ ಕೇವಲ ನೈತಿಕ ಚಿಂತನೆಗಳನ್ನು ಯೋಚಿಸಿದರೆ ಸಾಲದು ಅವುಗಳನ್ನು ಅನುಷ್ಠಾನಕ್ಕೆ ತರುವಂತಿರ ಬೇಕು.

4.**ಸಮ್ಯಕ್ ಕರ್ಮ :** ವ್ಯಕ್ತಿಯೊಬ್ಬ ತಾನು ಪಡೆದ ಜ್ಞಾನದಿಂದ ಉತ್ತಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಇದರಿಂದ ಶಾಂತಿ ಸಮಾಜ ನಿರ್ಮಾಣವಾಗುವುದರ ಜೊತೆಗೆ ಆತನ ಕೆಟ್ಟ ನಡವಳಿಕೆ ನಾಶಗೊಳ್ಳುತ್ತದೆ.

**5.ಸಮ್ಯಕ್ ಜೀವನ :** ಮನುಷ್ಯ ಹಿಂಸೆಯನ್ನು ತೊರೆದು ತ್ಯಾಗ ಬದುಕನ್ನು ಅನುಸರಿಸಬೇಕೆಂದು ಮತ್ತು ಇತರರನ್ನು ಶೋಶಿಸುವುದನ್ನು ಬಿಟ್ಟು ಶ್ರಮ ಬದುಕನ್ನು ಕಟ್ಟಿಕೊಳ್ಳ ಬೇಕೆಂದು ಹೇಳಲಾಗಿದೆ.

**6.ಸಮ್ಯಕ್ ವ್ಯಾಯಾಮ :** ಉದ್ದೇಶಿತ ಗುರಿ ಸಾಧನೆಗೆ ಒಳ್ಳೆಯ ಆರೋಗ್ಯಕ್ಕೆ ಮುಖ್ಯ.

**7.ಸಮ್ಯಕ್ ಸ್ಮತಿ :** ಉತ್ತಮ ಆಲೋಚನೆಗಳಿದ್ದಾಗ ಉದಾತ್ತ ಚಿಂತನೆಗಳು ಬರಲು ಸಾಧ್ಯ. ಇದರಿಂದ ಸಂಘ ಜೀವಿಯಾಗುವುದಲ್ಲದೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ.

**8.ಸಮ್ಯಕ್ ಸಮಾಧಿ :** ಪ್ರಾಪಂಚಿಕ ಸುಖದಿಂದ ಭೋಗಗಳಿಂದ ದೂರವಾಗಿ ಇಂದ್ರಿಯಗಳನ್ನು ನಿಗ್ರಹಿಸಿ ಕೊಂಡಾಗ ಮನುಷ್ಯನ ನೆಮ್ಮದಿ ಸಾಧ್ಯ.

ಹೀಗೆ ಬಸವಣ್ಣ ಅಶೋಕ ಅಂಬೇಡ್ಕರ್ ಗಾಂಧೀಜಿ ಮುಂತಾದ ದಾರ್ಶನಿಕರು ಬುದ್ಧನ ಅಷ್ಟಾಂಗ ಮಾರ್ಗವನ್ನು ಅಳವಡಿಸಿಕೊಂಡು ಹೃದಯದಿಂದ ಹೃದಯಕ್ಕೆ ಮಾನವ ಧರ್ಮವನ್ನು ಸಾರಿದ್ದು ಕಾಣಬಹುದಾಗಿದೆ ಈ ಅಷ್ಟಾಂಗ ಮಾರ್ಗಗಳು ಕನ್ನಡ ಕಾವ್ಯದಲ್ಲಿ ಹೇಗೆ ವ್ಯಕ್ತಗೊಂಡಿದೆ ಎಂದು ಅರ್ಥೈಸುವುದೆ ಈ ಲೇಖನದ ಪ್ರಮುಖಾಂಶವಾಗಿದೆ.

ಕನ್ನಡ ಕಾವ್ಯಕ್ಕೆ ಸುದೀರ್ಘವಾದ ಇತಿಹಾಸ ಮತ್ತು ಮಹತ್ವವಿದೆ. ಹಾಗಾಗಿ ಕನ್ನಡ ಕಾವ್ಯ ಪಂಪನಿಂದ ಹಿಡಿದು ಇಲ್ಲಿಯವರೆಗೆ ಅಂದರೆ ನವ ನವ್ಯೋತ್ತರ ಕಾಲಕ್ಕೂ ತನ್ನದೆ ಆದ ಮಹತ್ವ ಮತ್ತು ವಿಶಿಷ್ಟತೆಯನ್ನು ಪಡೆದುಕೊಂಡು ಸದಾ ಸತ್ಯದ ಮತ್ತು ವೈಚಾರಿಕ ಅಂಶವನ್ನು ತೆರೆದಿಡುವುಲ್ಲಿ ವಿಶೇಷವಾಗಿದೆ. ಬುದ್ಧನಂತಹ ವೈಚಾರಿಕವಾದಿಯನ್ನ ಕನ್ನಡ ಕಾವ್ಯಪರಂಪರೆ ಕಟ್ಟಿಕೊಡುವ ರೀತಿ ಮತ್ತು ಗಮನಿಸುವುದು ಕೂಡ ಮಹತ್ವದ್ದೆ ಆಗಿದೆ ಈ ಲೇಖನದಲ್ಲಿ ಈ ಪ್ರಮುಖಾಂಶವನ್ನು ಗಮನಿಸುವುದು ಮತ್ತು ಚರ್ಚಿಸುವುದು ಮುಖ್ಯವಾದದ್ದಾಗಿದೆ.

**ಶಿವರಾಮ ಕಾರಂತರು ಬರೆದಿರುವ ಭೋಧಿವೃಕ್ಷ**

ಅರಸೊತ್ತಿಗೆಯ ತುಳಿದು ಸಂಸಾರದಸುಖ ಕಳೆದು

ಭೀಕರದ ಕಾನನವ ಸೇರುತಿಹನು

ಕಾಡು ಕಲ್ಮುಳ್ಳುಗಳು ಹಿಂಸ್ರವಶು ಕೂಗುಗಳು

ಬಾಡಿಸುವ ಬಿಸಿಲ ಜಳಕಂಜದಿಹನು

ಕಾರಂತರ ಈ ಕವಿತೆಯು ಬುದ್ಧನ ಅಷ್ಟಾಂಗಮಾರ್ಗದ ಪರಿಕಲ್ಪನೆಯನ್ನು ತೆರೆದಿಡುತ್ತದೆ. ಇಲ್ಲಿ ಬುದ್ಧ ದೇವನ ಸರಳ ಬದುಕಿನ ಶೈಲಿಯನ್ನು ಕಾವ್ಯವು ಚಿತ್ರಿಸುವುದರ ಜೊತೆಗೆ ವೈಭೋಗದ ಬದುಕನ್ನು ತೊರೆಯುವ ಮತ್ತು ನೆಮ್ಮದಿಯನ್ನು ಕಂಡುಕೊಳ್ಳುವ ಮಾರ್ಗಗಳನ್ನು ಈ ಕವಿತೆಯು ಧ್ವನಿಸುತ್ತದೆ ಇಲ್ಲಿ ಕಾಡ ಹೊಕ್ಕ ಬುದ್ಧನು ಬಿಸಿಲು ಮಳೆ ಏನೆ ಎದುರಾದರು ಅವೆಲ್ಲವುಗಳನ್ನು ಮೀರುವ ಚಿತ್ರಣ ಇಲ್ಲಿದೆ.

**ಶ್ರೀನಿವಾಸರ ಜಯಗೀತೆ**

ಜಯ ಬುದ್ಧ ಗುರುದೇವ ಜಯ ಶುದ್ಧ ಚಾರಿತ್ರ

ಜಯ ತ್ರಿಲೋಕಚಾರ್ಯ ಜಯ ಜಗನ್ಮಿತ್ರ

ಜಯ ಪತಿತಪಾವನಾ ಜಯ ಹೆ ದೀನಾವನಾ

ಜಯ ದೇಶಿಕೇಂದ್ರ ಜಯ ಉದ್ಧಾರಕರ್ತ

ಜಯ ತ್ರೈಭುವ ಪೂಜ್ಯ ಜಯ ಧವಳ ಕೀರ್ತಿ

ಜಯ ಹೆ ಮಮ ಗುರುನಾಥ ಕಾರುಣ್ಯ ಮೂರ್ತಿ

ಶ್ರೀನಿವಾಸರ ಜಯಗೀತೆ ಕವಿತೆಯು ಬುದ್ಧದೇವನ ವ್ಯಕ್ತಿತ್ವ ಮತ್ತು ಆತನ ವಿಚಾರಧಾರೆಗಳನ್ನ ಕಟ್ಟಿಕೊಡುವ ಕವಿತೆ. ಇಲ್ಲಿ ಬುದ್ಧದೇವನು ತಾನು ಅಷ್ಟಾಂಗ ಮಾರ್ಗಗಳನ್ನ ತನ್ನ ಶಿಷ್ಯಂದರಿಗೆ ಭೋಧಿಸುವ ಮುನ್ನ ತನ್ನಲ್ಲೆ ಅಂತಹ ಗುಣಗಳನ್ನು ಅಳವಡಿಸಿಕೊಂಡಿದ್ದ ಎನ್ನುವುದಕ್ಕೆ ಈ ಕವಿತೆಯೆ ನೆರವಾಗುತ್ತದೆ. ಬುದ್ಧ ಶುದ್ಧತೆಯನ್ನ ಮತ್ತು ಬದ್ಧತೆಯನ್ನ ಸದಾ ಕಾಯ್ದಿರಿಸಿಕೊಳ್ಳುತ್ತಿದ್ದ ಆತ ಶುದ್ಧ ಚಾರಿತ್ರವನ್ನ ಒಳ್ಳೆಯ ಅಂಶಗಳನ್ನ ತನ್ನ ಅಷ್ಟಾಂಗಮಾರ್ಗದಲ್ಲಿ ಭೋದಿಸಿದ್ದಾನೆ. ಇದಲ್ಲದೆ

ಹಿಂಸೆ ಸದಾ ದೂರವಿರಿಸುತ್ತಿದ್ದ ಬುದ್ಧದೇವ ಕರುಣೆ ಮತ್ತು ಪ್ರೀತಿಯ ಹಂಚಲು ಪ್ರಯತ್ನಿಸಿದ ಮತ್ತು ಅವುಗಳನ್ನು ತನ್ನ ಬದುಕಿನಲ್ಲಿಯೂ ಅಳವಡಿಸಿಕೊಂಡಿದ್ದ

**ವಿ.ಸೀ ರವರ ಮಹಾತ್ಮ ಕವಿತೆ**

ಎಲ್ಲ ಕಾಲದ ಜನರ ಎಲ್ಲ ದೇಶದ ಜನರ

ಎದೆಗಳಲಿ ಹರಿದಿರುವ ಒಲುಮೆ ಒಂದೆಂದು

ಎಲ್ಲ ಜನಗಳ ಮನದಿ ಮಲೆತಿರುವ ಭಾವಗಳು

ವೇದನೆಯ ರೀತಿಗಳು ಒಂದೆ ಎಂದು

ಪ್ರಸ್ತುತ ವೀಸಿ ರವರ ಈ ಕವಿತೆಯು ಬುದ್ಧನ ಅಷ್ಟಾಂಗ ಮಾರ್ಗದ ಪರಿಕಲ್ಪನೆಯನ್ನ ಹೋಲುತ್ತದೆ. ಬುದ್ಧದೇವ ಸದಾ ಮಾನವಧರ್ಮವನ್ನೆ ಸಾರಿದ್ದು ಅದನ್ನೆ ಕಾಪಾಡಿಕೊಂಡದ್ದು ಹೌದು. ಈ ಕವಿತೆಯು ಮನುಷ್ಯ ಧರ್ಮವೆ ಮುಖ್ಯ ಎನ್ನುವುದನ್ನು ಧ್ವನಿಸುತ್ತದೆ ಹಾಗಾಗಿ ಇಲ್ಲಿ ಕರುಣೆ ಮತ್ತು ಪ್ರೀತಿ ಎಲ್ಲರ ನೋವು ಹತಾಶೆ ಬಾದೆ ಒಂದೆ ಎಂಬುದನ್ನು ಇಲ್ಲಿ ಕಾಣಬಹುದಾಗಿದೆ.

ಪ್ರಸ್ತುತ ಈ ಲೇಖನದಲ್ಲಿ ಬುದ್ಧದೇವನ ಅಷ್ಟಾಂಗಮಾರ್ಗದ ಪರಿಕಲ್ಪನೆಯನ್ನೆ ಚರ್ಚಿಸುವುದಾಗಿತ್ತು. ಹಾಗಾಗಿ ಇಲ್ಲಿ ಕೆಲವು ಕವಿತೆಗಳ ಹಿನ್ನೆಲೆಯಲ್ಲಿ ಬುದ್ಧದೇವನ ಅಷ್ಟಾಂಗ ಮಾರ್ಗದ ಕೆಲವು ಅಂಶಗಳನ್ನು ಚರ್ಚಿಸಲಾಗಿದೆ. ಬುದ್ಧದೇವನು ತಾನು ಭೋದಿಸಿದ ಭೋದನೆಗಳೆ ಅಷ್ಟಾಂಗಮಾರ್ಗಗಳಾದವು ಇವು ಮನುಷ್ಯಲೋಕಕ್ಕೆ ಮಾದರಿಯೂ ಕೂಡ ಹೌದು ಎಂಬುದನ್ನು ಈ ಹಿನ್ನಲೆಯಲ್ಲಿ ತಿಳಿಯಲಾಗಿದೆ.

**ಕೊನೆ ಟಿಪ್ಪಣಿ**

1.ವೈಶಾಖ ಶುಕ್ಲ ಪೂರ್ಣಿಮ: ಜಿ.ಪಿ ರಾಜರತ್ನಂ ಶಾಕ್ಯ ಸಾಹಿತ್ಯ ಮಂಟಪ ಮಲ್ಲೇಶ್ವರ, ಬೆಂಗಳೂರು 1940 ಪುಟ.12

2.ವೈಶಾಖ ಶುಕ್ಲ ಪೂರ್ಣಿಮ: ಜಿ.ಪಿ ರಾಜರತ್ನಂ ಶಾಕ್ಯ ಸಾಹಿತ್ಯ ಮಂಟಪ ಮಲ್ಲೇಶ್ವರ, ಬೆಂಗಳೂರು 1940 ಪುಟ.01

3.ವೈಶಾಖ ಶುಕ್ಲ ಪೂರ್ಣಿಮ: ಜಿ.ಪಿ ರಾಜರತ್ನಂ ಶಾಕ್ಯ ಸಾಹಿತ್ಯ ಮಂಟಪ ಮಲ್ಲೇಶ್ವರ, ಬೆಂಗಳೂರು 1940 ಪುಟ.02

**ಪರಾಮರ್ಶನ ಗ್ರಂಥಗಳು**

1.ಕನ್ನಡ ಸಾಹಿತ್ಯ ಸಂಸಕೃತಿ ಕೋಶ: ಡಾ.ಚಿ.ಸಿ ನಿಂಗಣ್ಣ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಕಲಬುರಗಿ 2017

2.ಬುದ್ಧ ಮತ್ತು ಆತನ ದಮ್ಮ –ಡಾ.ಎಸ್ ಜಗದೀಶಕೊಪ್ಪ, ಪಾಲಿ ಇನ್ಸ್ಟ್ಯೂಟ್ ಕಲಬುರಗಿ –2022

3.ಬುದ್ಧ ಭಗವಾನ್ :ಎಚ್ ಗಂಗಾಧರನ್ , ಪ್ರಚಾರ ಪುಸ್ತಕ ಮಾಲೆ 1997

4.ಬಹುತ್ವದ ಭಾರತ ಮತ್ತು ಬೌದ್ಧತಾತ್ವಿಕತೆ : ಡಾ. ಮೂಡ್ನಕೂಡು ಚಿನ್ನಸ್ವಾಮಿ , ಲಡಾಯಿ ಪ್ರಕಾಶನ ಗದಗ –2018